ಚಲನಚಿತ್ರ ಮಂದಿರಗಳಿದ್ದು, ಸದಾ ಮಾರ್ನಿಂಗ್ ಶೋ, ಮ್ಯಾಟನಿ, ನೈಟ್ ಶೋಗಳಿಗೆ ಅಲೆದಾಡುವ ಸಿನಿಮಾರಸಿಕರು, ಬಜಾರ್‌ಗೆ ಹೋಗುವುದರಿಂದ ಇಪ್ಪತ್ತುನಾಲ್ಕುಗಂಟೆಯೂ ತುಳಿಸಿಕೊಂಡು ಬೀದಿ ಕೆಟ್ಟು ಕೆರ ಹಿಡಿದಿದೆ. ಈ ದಾರಿಯಲ್ಲಿ ಆಟೋಗಳಲ್ಲಿ ಬರುವ ಹೆಣ್ಣುಮಕ್ಕಳು ಹೆರಿಗೆ ಆಸ್ಪತ್ರೆ ತಲುಪುವ ಮೊದಲೇ ಸುಖ ಪ್ರಸವಕಂಡ ದಾಖಲೆಗಳಿವೆ. ಅಲ್ಲಿಯೇ ಕೂಸಿನ ಭವಿಷ್ಯ ಕೇಳಬೇಕೆಂದರೆ ಜ್ಯೋತಿಷ್ಯಾಲಯಗಳೂ ಇವೆ. ಇವು ಒಂದೇ ಬೀದಿಯಲ್ಲಿ ತುಂಬಿತುಳುಕುತ್ತಿವೆ ಎಂದರೆ ನೀವು ನಂಬಲೇಬೇಕು.

ಸಾಲದ್ದಕ್ಕೆ ಭವಾನಿ ಸಂಗೀತಶಾಲೆಯೂ ಇವುಗಳ ಮಧ್ಯೆ ಇಕ್ಕಟ್ಟಾದ ದಾರಿಯಲ್ಲಿದೆಯೆಂದು ಹೇಳಲು ಇಷ್ಟೆಲ್ಲಾ ಹೇಳಬೇಕಾಗಿದ್ದರಿಂದ 'ಬೋರ್' ಆಗಿದ್ದರೆ ಕ್ಷಮೆ ಇರಲಿ. ಹಗಲುರಾತ್ರಿ ಗಿಜಿಗುಟ್ಟುತ್ತಾ ಕಣ್ತೆರೆದಿರುವ ಧರ್ಮಶಾಲಾ ರಸ್ತೆಯಲ್ಲೇ ಎಲ್ಲರ ಕಣ್ಣು ತಪ್ಪಿಸಿ, ಚಿಗುರೊಡೆವ ಪ್ರೇಮ ಅದಿನ್ನೆಂತಹ ಕಿಲಾಡಿ ಇದ್ದಿರಬಹುದು! ಅನಾದಿಕಾಲದಿಂದ ಸ್ಥಾಪಿತವಾಗಿರುವ ಭವಾನಿ ಸಂಗೀತಶಾಲೆಗೆ ಹೆಚ್ಚಾಗಿ ಬರುವವರೇ ಹುಡುಗಿಯರು. ಆಗಾಗ ವಿಸಿಟ್ ಕೊಟ್ಟು ಕಾಣೆಯಾಗುವ ಸಂಗೀತ ಶೋಕಿಯ ಪೋರ್ಕಿಗಳೂ ಇದ್ದಾರೆ. ಇವರಲ್ಲಿ ಯಾರೂ ವಿದ್ವಾಂಸರಾಗಿ ಕಛೇರಿ ಮಾಡಿದ ಉದಾಹರಣೆಗಳೇ ವಿರಳ. ಸಮಾರಂಭಗಳಲ್ಲೋ, ಕಾಲೇಜುಗಳಲ್ಲೋ, ಪ್ರೇಯರ್ ಹಾಡುವಷ್ಟು ಗಂಟಲನ್ನು ಸಾಫ್ಟ್ ಮಾಡಿಕೊಳ್ಳಲು ಬರುವವರು, ಕನ್ಯೆ ನೋಡಲು ಬರುವ ವರಮಹಾಶಯನ ಮುಂದೆ ದೇವರ ನಾಮ ಹಾಡಿ, ಪಂಗನಾಮ ಹಾಕಲೆಂದೇ ಪಣತೊಟ್ಟು ಬರುವ ಟೆಂಪ್ರರರಿ ಹಾಡುಗಾರ್ತಿಯರು, ರಿಯಾಲಿಟಿ ಶೋಗಳಲ್ಲಿ ಹಾಡಿ ಮಿಂಚಿದರಷ್ಟೇ ಸಾಕೆಂದು ಜಿದ್ದಿಗಾಗಿ ಸಾಂಗ್ಸ್ ಪ್ರಾಕ್ಟೀಸ್‌ಗೆ ಬರುತ್ತಾ ಗೆಲ್ಲುವ ಕನಸು ಕಾಣುವ ಮಿತ ಸಾಧನೆಯ ಡ್ರೀಮ್‌ಗರ್ಲ್‌ಗಳೂ ಸೇರಿ ಸದಾ ಶಾಲೆ ಹೌಸ್‌ಫುಲ್. ನಾರಾಯಣಜ್ಜನೆಂಬ ಶೂದ್ರ ಹರೆಯದಲ್ಲಿದ್ದಾಗ ತೆರೆದ ಸಂಗೀತಶಾಲೆಯು ಮೊದಮೊದಲು ಮೇಲ್ವರ್ಗದ ಮುನಿಸಿಗೂ ಕಾರಣವಾಗಿ ಭವಾನಿ ಸಂಗೀತಶಾಲೆಯ ಬೋರ್ಡ್ ಮೇಲೆ 'ಭವಾನಿ ಹೇರ್ ಕಟಿಂಗ್ ಶಾಪ್' ಎಂದು ಬರೆದ ಪುಂಡರಿಂದ ರಕ್ಷಿಸಿಕೊಂಡ ಶಾಲೆ ಮಾಯಾಮಾಳವಗೌಳ ಹಾಡುತ್ತಾ ಇದೀಗ ಮೊಮ್ಮಗನ ಮಾಸ್ತರಿಕೆಯಲ್ಲಿ ಮಾಡರ್ನ್ ಟಚ್ ಪಡೆದು 'ಭವಾನಿ ಮ್ಯೂಸಿಕ್ ಸೆಂಟರ್' ರೂಪ ಪಡೆದಿದೆ. ಏನು ಹೇಳಿ ತೊಡೆತಟ್ಟಿದರೂ ಅವೇ ಹಳೆ ಸಪ್ತಸ್ವರದಲ್ಲೇ ಗಾಯನ ಮೋಡಿ ಮಾಡಬೇಕಿದೆ. ಮೊಮ್ಮಗ ವೀಣೆಯಲ್ಲೇ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಬಂದು ಪತ್ರಿಕೆಗಳಲ್ಲಿ ಮಿಂಚಿದ್ದರಿಂದ ಅನೇಕ ಕಡೆಗಳಲ್ಲಿ ವೀಣಾ ಕಛೇರಿಕೊಟ್ಟಿದ್ದ. ಕಛೇರಿಗಳಲ್ಲಿ ಮಿಂಚಿದ್ದಕ್ಕಿಂತಲೂ ಮಿಗಿಲಾಗಿ, ಕೆಂಪಗೆ ನೀಳವಾಗಿದ್ದು ಸದಾ ಜೀನ್ಸ್, ದೊಗಲೇ ಜುಬ್ಬ ತೊಟ್ಟು ನಗುನಗುತ್ತಾ ಅಮುಲ್ ಬೇಬಿಯನ್ನು ನೆನೆಪಿಸುವ ಹುಡುಗನಾದ್ದರಿಂದ ಸಂಗೀತ ಕಲಿಯಲೆಂದು ಬರುವ ಹುಡುಗಿಯರಿಗೊಂದು ಸ್ಪೆಷಲ್ ಅಟ್ರಾಕ್ಷನ್ ಆಗಿದ್ದ. ನೀಳವಾದ ಕೆಂಪು ಬೆರಳುಗಳಿಂದ ಇವನು ಚಕಚಕನೆ ವೀಣೆ ನುಡಿಸುವುದನ್ನು ನೋಡಲೆಂದೇ ಟ್ಯೂಶನ್‌ಗೆ ಬರುವ ಹುಡುಗಿಯರು ಟ್ಯೂಶನ್ ಮುಗಿದರೂ ಮನೆಯನ್ನೇ ಮರೆತು ಟೆಂಟು ಹಾಕುತ್ತಾರೆ. ಇವನಿಗೂ ಹುರುಪು. ಕಛೇರಿ ಮಾಡುವಷ್ಟೇ ಎನರ್ಜಿ ಹಾಕಿ ವೀಣೆ ನುಡಿಸುತ್ತಾ ಆಗೀಗ ಹಿಂದಿ ಹಾಡುಗಳನ್ನೂ ನುಡಿಸಿ ಹುಡುಗಿಯರ ಹಾರ್ಟ್‌ಬ್ರೇಕ್ ಮಾಡುತ್ತಾ ತಾನು ಪುರಾತನ ಸಂಗೀತ ಮೇಷ್ಟ್ರಲ್ಲ, ಎಲ್ಲಾ ಕಲೆಗಳನ್ನು ಬಲ್ಲೆ, ನಾನೆಲ್ಲಾ ಕಲಿಸಬಲ್ಲೆ ಎಂಬಷ್ಟು ಹೋಶಿಯಾರ್. ಹುಡುಗಿಯರೇ ಅವನು ವೀಣಾವಾದನ ವೈಖರಿಯನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದು ಫೇಸ್‌ಬುಕ್‌ಗೆ ಹಾಕಿ ಪ್ರೋಪಾಗ್ಯಾಂಡಾ ಮಾಡುವುದರಿಂದಾಗಿ ರಾತ್ರಿ ಹತ್ತಾದರೂ ಮ್ಯೂಸಿಕ್ ಸೆಂಟರ್ ರೆಸ್ಟ್‌ಲೆಸ್. ಹುಡುಗ ಓಕಲ್ ಹೇಳುವುದರಲ್ಲೂ ಜಾಣನಾದ್ದರಿಂದ ಮಿಡ್ಲ್‌ಸ್ಕೂಲ್ ಹುಡುಗಿಯರಿಂದ ಕಾಲೇಜ್ ಗರ್ಲ್ಸ್ ವರೆಗೂ ಜಮಾಯಿಸುತ್ತಾರೆ. ಅಜ್ಜ ಪಾಠ ಹೇಳುತ್ತಾರಾದರೂ ಇವನಿಗಾಗಿ ವೇಟ್ ಮಾಡುವವರೇ